**ಕರ್ನಾಟಕ ಲೋಕಸೇವಾ ಆಯೋಗ**

**ಸಂಖ್ಯೆ:ಪಿಎಸ್‌ಸಿಇ(2)64/2022-2024** **ದಿನಾಂಕ:17/08/2023**

**ಸೂಚನೆ**

**ಆಯೋಗದ ಅಧಿಸೂಚನೆ ಸಂಖ್ಯೆ:ಇ(2)3070/2019-2020/ಪಿಎಸ್‌ಸಿ ದಿನಾಂಕ:31/01/2020** ಹಾಗೂ ಸೇರ್ಪಡೆ ಅಧಿಸೂಚನೆಗಳು ದಿನಾಂಕ:10/02/2020 ಮತ್ತು 15/01/2021ರಲ್ಲಿ ಅಧಿಸೂಚಿಸಿರುವ 2019ನೇ ಸಾಲಿನ ಸಹಾಯಕರು/ಪ್ರಥಮ ದರ್ಜೆ ಸಹಾಯಕರ ಹೈದ್ರಾಬಾದ್-ಕರ್ನಾಟಕ ವೃಂದದ ಹುದ್ದೆಗಳ ನೇಮಕಾತಿಗೆ ನಿಯಮಾನುಸಾರ ಶೇ 30% ರಷ್ಟು ಹೆಚ್ಚುವರಿ ಪಟ್ಟಿಯನ್ನು ಸಿದ್ದಪಡಿಸಿ ಈಗಾಗಲೇ ದಿನಾಂಕ:17/02/2023ರಂದು ಪ್ರಕಟಿಸಲಾಗಿರುತ್ತದೆ. ಪ್ರಸ್ತುತ, ಸರ್ಕಾರದ ವಿವಿಧ ಇಲಾಖೆಗಳು ಹೆಚ್ಚುವರಿ ಆಯ್ಕೆಪಟ್ಟಿಗಾಗಿ ಸಲ್ಲಿಸಿರುವ ಬೇಡಿಕೆ ಪತ್ರ/ಪ್ರಸ್ತಾವನೆಗಳಿಗನುಸಾರವಾಗಿ (ನಮೂನೆ-7) ಹೆಚ್ಚುವರಿ ಆಯ್ಕೆಪಟ್ಟಿಯನ್ನು ನಿಯಮಾನುಸಾರ ಸಿದ್ಧಪಡಿಸಲು ಕ್ರಮವಹಿಸಲಾಗುತ್ತಿದೆ.

ಈ ಸಂಬಂಧ, ಆಯೋಗವು ಸದರಿ ಹುದ್ದೆಗಳ ನೇಮಕಾತಿಗೆ ಈಗಾಗಲೇ ದಿನಾಂಕ:17/02/2023ರಂದು ಪ್ರಕಟಿಸಲಾದ **ಹೆಚ್ಚುವರಿ ಪಟ್ಟಿಯಲ್ಲಿ ಅರ್ಹರಾಗಿರುವ 54 ಅಭ್ಯರ್ಥಿಗಳ ಪೈಕಿ ಹೆಚ್ಚುವರಿ ಆಯ್ಕೆಪಟ್ಟಿಯಲ್ಲಿ ಆಯ್ಕೆಯಾಗಲು ಇಚ್ಚಿಸದ (Not willing) ಅಭ್ಯರ್ಥಿಗಳು ಮಾತ್ರ ದಿನಾಂಕ:30/08/2023** ರೊಳಗಾಗಿ ಯಾವುದಾದರೊಂದು ಮೂಲ ಗುರುತಿನ ಚೀಟಿಯೊಂದಿಗೆ **"ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು-560001,** ಇವರ ಸಮ್ಮುಖದಲ್ಲಿ ಖುದ್ದಾಗಿ ಹಾಜರಾಗಿ ಲಿಖಿತವಾಗಿ ಸ್ವ-ಇಚ್ಛಾ ಹೇಳಿಕೆಯನ್ನು ಸಲ್ಲಿಸುವಂತೆ ಸೂಚಿಸಿದೆ.

**(ಸುರಳ್ಕರ್ ವಿಕಾಸ್ ಕಿಶೋರ್)**
ಕಾರ್ಯದರ್ಶಿ,
ಕರ್ನಾಟಕ ಲೋಕಸೇವಾ ಆಯೋಗ.